ಕೋಲಾರ	323	151	172
ಗೌರೀ ಬಿದನೂರು	282	122	160
ಗುಡಿಬಂಡೆ	57	37	20
ಮಾಲೂರು	157	86	71
ಮುಳಬಾಗಿಲು	188	75	113
ಶ್ರೀನಿವಾಸಪುರ	215	52	163
ಶಿಡ್ಲಘಟ್ಟ	286	48	138
ಒಟ್ಟು	2361	1069	1292

ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ 48 ಅಂಗನವಾಡಿ ಕೇಂದ್ರಗಳಿಗೆ ಕಟ್ಟಡವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಅಂಗನವಾಡಿ ಕೇಂದ್ರಗಳಿಗೆ ಅನುದಾನದ ಲಭ್ಯತೆಯ ಮೇರೆಗೆ ಹಂತಹಂತವಾಗಿ ಕಟ್ಟಡಗಳನ್ನು ನಿರ್ಮಿಸಲಾಗುತ್ತದೆ.

ಮೈಸೂರಿನ ಬಂಡಿಪಾಳ್ಯದ ಮಾರುಕಟ್ಟೆ ಕುರಿತು

1877(2292): ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ಕೃಷಿಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮೈಸೂರಿನ ನಂಜನಗೂಡ ರಸ್ತೆಯಲ್ಲಿರುವ ಬಂಡೀಪಾಳ್ಯದ ಮಾರುಕಟ್ಟೆಯಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇರುವುದು ಅಲ್ಲಿನ ವರ್ತಕರು ಮನವಿ ಸಲ್ಲಿಸಿದ್ದು ನಿಜವೇ; ಹಾಗಿದ್ದಲ್ಲಿ ಆ ಬಗ್ಗೆ ಯಾವ ಯಾವ ಕ್ರಮ ಕೈಗೊಳ್ಳಲಾಗುವುದು;

ಆ. ಮೂಲಭೂತ ಸೌಕರ್ಯ ಕಲ್ಪಿಸಲು ತಗಲುವ ಅಂದಾಜು ವೆಚ್ಚವೆಷ್ಟು; ವಿವರ ನೀಡುವುದು.

ಇ. ಇಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ವಿಚಾರದಲ್ಲಿ ಯಾವಾಗ ಕ್ರಮ ಕೈಗೊಳ್ಳಲಾಗುವುದು;

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು)

ಅ. ಮೈಸೂರು ಧಾನ್ಯ ವರ್ತಕ ಸಂಘದವರು ಕೆಲವು ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಮನವಿ ಮಾಡಿದ್ದು, ಸಂಬಂಧಿಸಿದಂತೆ ಕ್ರಮ ಜರುಗಿಸಲಾಗಿದೆ. ಪ್ರಾಂಗಣದ ಸುತ್ತ ಕಾಂಪೌಂಡ್ ನಿರ್ಮಾಣ, ಪ್ರಾಂಗಣದ ಎದುರಿಗೆ ಪುರಸಭೆಯವರ ತ್ಯಾಜ್ಯ ವಸ್ತು ಸಂಗ್ರಹಣಾ ಆವರಣದಿಂದ ದುರ್ಗಂಧ ಬರದಂತೆ ಮುಂಭಾಗದಲ್ಲಿ ತಡೆಗೋಡೆ ನಿರ್ಮಿಸುವ ಕಾಮಗಾರಿ, ಶೌಚಾಲಯಗಳ ನಿರ್ಮಾಣ ಮಾಡಲಾಗಿದೆ. ಆರಕ್ಷಕ ಉಪಠಾಣೆಯನ್ನು ಸ್ಥಾಪಿಸಲಾಗಿದೆ. ಪಶುವೈದ್ಯಶಾಲೆ, ಆರೋಗ್ಯ ಕೇಂದ್ರ, ರಾಷ್ಟ್ರೀಕೃತ ಬ್ಯಾಂಕಿನ ಶಾಖೆಯನ್ನು ತೆರೆಯುವುದು, ಅಂಚೆಕಛೇರಿ, ಬಸ್ ತಂಗುದಾಣ, ಪ್ರಾಂಗಣದ ಮುಂಭಾಗದಿಂದ ಮೈಸೂರು ನಗರದವರೆಗೆ ಜೋಡಿ ರಸ್ತೆ ನಿರ್ಮಾಣ ಇವುಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟವರೊಂದಿಗೆ ಪತ್ರ ವ್ಯವಹಾರ ಮಾಡಲಾಗಿದೆ.

ಆ. ಈಗಾಗಲೇ ಅಂದಾಜು ರೂ. 8.00 ಕೋಟಿ ವೆಚ್ಚದಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ. ಹಾಗೂ ಅವಶ್ಯವಿರುವ ಇತರೆ ಮೂಲಭೂತ ಸೌಕರ್ಯಗಳನ್ನು ಹಂತ ಹಂತವಾಗಿ ಒದಗಿಸಲಾಗುವುದು.

ಇ. ಈಗಾಗಲೇ ಒದಗಿಸಲಾಗಿರುವ ಮೂಲಭೂತ ಸೌಕರ್ಯಗಳಲ್ಲದೆ ಅಗತ್ಯವಿರುವ ಇತರೇ ಸೌಕರ್ಯಗಳನ್ನು ತ್ವರಿತವಾಗಿ ಹಂತಹಂತವಾಗಿ ಒದಗಿಸಲಾಗುವುದು.

ಬೆಂಗಳೂರು ನಗರದಲ್ಲಿರುವ ಬಡವರಿಗೆ ಹಳದಿ ಪಡಿತರ ಚೀಟಿ ವಿತರಣೆ

1879(2156): ಶ್ರೀ ಎ. ಸೋಮಣ್ಣ (ಬನ್ನಿಪೇಟೆ) : ಮಾನ್ಯ ಆಹಾರ ಮತ್ತು ನಾಗರೀಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು ನಗರದಲ್ಲಿ ಇಲ್ಲಿಯವರೆಗೆ ಎಷ್ಟು ಕೊಳಚೆ ನಿವಾಸಿಗಳಿಗೆ ಹಳದಿ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು);

ಆ. ಬೆಂಗಳೂರು ನಗರದಲ್ಲಿ ಬನ್ನಿಪೇಟೆ, ಶ್ರೀರಾಮಪುರ, ಶಿವಾಜಿನಗರ, ಮುಂತಾದ ಪ್ರದೇಶಗಳಲ್ಲಿ ಬಡವರು ವಾಸಿಸುತ್ತಿದ್ದು, ಇವರಿಗೆ ಹಳದಿ ಕಾರ್ಡ್‌ಗಳನ್ನು ನೀಡಲು ಸರ್ಕಾರ ಕ್ರಮ ಕೈಗೊಂಡಿದೆಯೇ;

ಇ. ಬೆಂಗಳೂರು ನಗರ ಪ್ರದೇಶಗಳಲ್ಲಿ ವಾಸಿಸುವ ಬಡವರಿಂದ ಅರ್ಜಿ ಕರೆದು ಇಂತಿಷ್ಟು ದಿನಗಳಲ್ಲಿ ಅರ್ಹ ಅರ್ಜಿದಾರರಿಗೆ ಹಳದಿ ಪಡಿತ ಚೀಟಿಗಳನ್ನು ವಿತರಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆಯೆ?

ಶ್ರೀ ರಾಮಲಿಂಗರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ. 136470 ಕೊಳಚೆ ನಿವಾಸಿಗಳಿಗೆ ಹಳದಿ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ. ವಿಧಾನ ಸಭಾ ಕ್ಷೇತ್ರವಾರು ಮಾಹಿತಿ ಈ ಕೆಳಕಂಡಂತಿರುತ್ತದೆ.

	ಕ್ಷೇತ್ರ	ಪಡಿತರ ಚೀಟಿ ಸಂಖ್ಯೆ
1.	ಉತ್ತರಹಳ್ಳಿ	37784
2.	ಮಲ್ಲೇಶ್ವರಂ	5061
3.	ಜಯಮಹಲ್	5404
4.	ಯಲಹಂಕ	14089
5.	ಬಸವನಗುಡಿ	3184
6.	ಜಯನಗರ	18115
7.	ಚಾಮರಾಜಪೇಟೆ	4123
8.	ಚಿಕ್ಕಪೇಟೆ	3763
9.	ಶಿವಾಜಿನಗರ	511
10.	ಗಾಂಧಿನಗರ	6265
11.	ಶಾಂತಿನಗರ	2649
12.	ಭಾರತಿನಗರ	6231
13.	ವರತೂರು	7133
14.	ಬನ್ನಿಪೇಟೆ	12409
15.	ರಾಜಾಜಿನಗರ	9749
	ಒಟ್ಟು	136470